ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ

Karnataka State Road Transport Corporation

Recruitment Section (ನೇಮಕ ಶಾಖೆ)

ಸಂಖ್ಯೆ:ಕರಾಸಾ/ಕೇಕ/ನೇಮಕ/ಸಿ-2/114 /18-19 ದಿನಾಂಕ: 04 -01-2019

**ಪತ್ರಿಕಾ ಪ್ರಕಟಣೆ**

ವಿಷಯ : ದರ್ಜೆ-3ರ ಮೇಲ್ವಿಚಾರಕೇತರ ವಿವಿಧ ಹುದ್ದೆಗಳ ನೇಮಕಾತಿ ಕುರಿತು.

ಉಲ್ಲೇಖ: ಜಾಹೀರಾತು ಸಂಖ್ಯೆ. 1/2016 & 2/2016 ದಿನಾಂಕ:6-1-2016.

*****

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ವತಿಯಿಂದ ಮೇಲ್ಕಂಡ ಜಾಹೀರಾತುಗಳನ್ವಯ ದರ್ಜೆ-3 ಮೇಲ್ವಿಚಾರಕೇತರ ವರ್ಗದ ವಿವಿಧ ಹುದ್ದೆಗಳ ಆಯ್ಕೆಗೆ ಮೂಲ ದಾಖಲಾತಿ ಮತ್ತು ದೇಹದಾರ್ಢ್ಯತೆ ಪರಿಶೀಲನೆಯನ್ನು ದಿನಾಂಕ: 10-01-2019 ರಿಂದ 24-01-2019 ರವರೆಗೆ ನಡೆಸಲು ತೀರ್ಮಾನಿಸಲಾಗಿದ್ದು, ಅದರಂತೆ 1:5 ರ ಅನುಪಾತದಲ್ಲಿ ಅರ್ಹರಾದ ಅಭ್ಯರ್ಥಿಗಳಿಗೆ ದಿನಾಂಕ:29-12-2018 ರಿಂದ ಕರೆಪತ್ರಗಳನ್ನು ಡೌನ್-ಲೋಡ್ ಮಾಡಿಕೊಳ್ಳಲು ಸಂಸ್ಥೆಯ ವೆಬ್-ಸೈಟ್ www.ksrtcjobs.com ನಲ್ಲಿ ಅನುವು ಮಾಡಲಾಗಿರುತ್ತದೆ.

ಅದರಂತೆ ಅರ್ಹರಾದ ಅಭ್ಯರ್ಥಿಗಳು ಸಂಸ್ಥೆಯ ವೆಬ್-ಸೈಟ್ ಮೂಲಕ ಕರೆ ಪತ್ರಗಳನ್ನು ಡೌನ್-ಲೋಡ್ ಮಾಡಿಕೊಂಡು ಕರೆಪತ್ರದಲ್ಲಿ ನಿಗಧಿಪಡಿಸಿರುವ ದಿನಾಂಕದಂದು ದಾಖಲಾತಿ ಪರಿಶೀಲನೆಗೆ ಹಾಜರಾಗುವುದು. ದಾಖಲಾತಿ ಪರಿಶೀಲನೆ ಮುಕ್ತಾಯಗೊಂಡ ನಂತರ ಹಾಜರಾಗುವ ಅಭ್ಯರ್ಥಿಗಳಿಗೆ ಯಾವುದೇ ಅವಕಾಶ ನೀಡಲಾಗುವುದಿಲ್ಲ. ಸದರಿ ಹುದ್ದೆಗಳ ಆಯ್ಕೆಗೆ ಯಾವುದೇ ರೀತಿಯ ಸಂದರ್ಶನ ಹಾಗೂ ಸಂದರ್ಶನದ ಅಂಕಗಳು ಇರುವುದಿಲ್ಲ. ನಿಗದಿತ ವಿದ್ಯಾರ್ಹತೆಯಲ್ಲಿ ಗಳಿಸಿದ ಶೇಕಡವಾರು ಅಂಕ ಹಾಗೂ ಮೆರಿಟ್/ರೋಸ್ಟರ್ ಆಧಾರದ ಮೇಲೆ ಆಯ್ಕೆ ಮಾಡಲಾಗುವುದು. ಅಭ್ಯರ್ಥಿಗಳು ಯಾವುದೇ ಶಿಫಾರಸ್ಸು, ಪ್ರಭಾವ ಹಾಗೂ ಆಮಿಷಗಳಿಗೆ ಅವ್ಯವಹಾರಗಳಿಗೆ ಒಳಗಾಗಬಾರದೆಂದು ಸಂಸ್ಥೆಯು ಈ ಮೂಲಕ ಸ್ಪಷ್ಟಪಡಿಸಿದೆ.

ಹೆಚ್ಚಿನ ಮಾಹಿತಿಗಾಗಿ ನಿಗಮದ ವೆಬ್-ಸೈಟ್ ಆದ www.ksrtcjobs.com ಅನ್ನು ವೀಕ್ಷಿಸುವುದು.

ನಿರ್ದೇಶಕರು (ಸಿಬ್ಬಂದಿ ಮತ್ತು ಪರಿಸರ)